ಓ.ಎಸ್. ನಂಬರ 8/2022

ಪಿ.ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 29-09-2023.

**ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಆರ್.ಎಂ.ಎಂ. ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು ವಾದಿ ಆಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಹಾಜರಪಡಿಸಿದ್ದು, ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತದೆ ಮತ್ತು ಸದ್ರಿ ವಿಷಯವನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಪ್ರತಿಜ್ಞಾ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ದಾವಾಸ್ತಿಗೆ ಸಂಬಂಧಿಸಿದಂತೆ ಆರು ಪಹಣಿ ಪತ್ರಿಕೆಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 1 (ಎರಡು ಹಾಳೆಗಳು), 2 ರಿಂದ 6 ಎಂದು, 1 ನೇ ಪ್ರತಿವಾದಿ ಮುಂಡಗೋಡ ತಹಶೀಲ್ದಾರರವರಿಗೆ ನೀಡಿದ ಅರ್ಜಿಯ ಯಥಾ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ 7 ಎಂದು, ದಿಃ 18-05-2017 ರ ಮ್ಯುಟೇಶನ ರಜಿಸ್ಟರಿನ ಯಥಾ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ 8 ಎಂದು, ನಮ್ಮ ಕುಟುಂಬದ ವಂಶವೃಕ್ಷದ ದೃಢೀಕರಣ ಪತ್ರದ ಯಥಾ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ 9 ಎಂದು, ಸದ್ರಿ ವಂಶವೃಕ್ಷದ ದೃಢೀಕರಣ ಪತ್ರವನ್ನು ಪಡೆದಾಗ ನೀಡಿದ ಪ್ರಮಾಣ ಪತ್ರದ ಯಥಾ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ 9(ಎ) ಎಂದು, ದಿಃ 24-06-2017 ರ ತಿಳುವಳಿಕೆ ಪತ್ರದ ಯಥಾ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ 10 ಎಂದು, ಪ್ರತಿವಾದಿಗಳು ಸೃಷ್ಟಿಸಿಕೊಂಡಿರುವಂತಹ ದಿಃ 15-09-2016 ವಾಂಟಣಿ ಕರಾರು ಪತ್ರದ ಯಥಾ ನಕಲನ್ನು ಹಾಜರಪಡಿಸಿದ್ದು ಅದನ್ನು ನಿಪಿ 11 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು).

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**